**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆಃ 201/2024**

| | | |
|---|---|---|
| ಹೆಸರು | ಶ್ರೀ ಶಶಿಕಲಾ | ಚಾಸಾಃ 02 |
| ಗಂಡನ ಹೆಸರು | ಶ್ರೀ ನಾಗರಾಜು | ಫ್ರಾಸಾಃ 02 |
| ವಯಸ್ಸು | 35 ವರ್ಷ | ಸಾಕ್ಷಿಯನ್ನು ದಿನಾಂಕಃ 30.09.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೂಲಿ | |
| ವಾಸ | ಚಿಕ್ಕಬೇಗುಊರು ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಚಾಸ-1 ನನ್ನ ಗಂಡ. ಆರೋಪಿಗಳು ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ. ಪುಟ್ಟಮಾದಮ್ಮರವರ ಖಾಲಿ ಜಾಗದಲ್ಲಿ ಆಕೆಯ ಅನುಮತಿ ಪಡೆದು ದನಕರುಗಳನ್ನು ಕಟ್ಟಿ ಹಾಕುತ್ತಿದ್ದೇವು. ಸುಮಾರು 2 ವರ್ಷಗಳ ಹಿಂದೆ ಬೆಳಿಗ್ಗೆ 7.00 ಗಂಟೆ ಸಮಯಕ್ಕೆ ಆರೋಪಿಗಳು ಸದರಿ ಜಾಗದಲ್ಲಿ ದನಕರುಗಳನ್ನು ಕಟ್ಟಿಹಾಕಬೇಡ ಎಂದು ಹೇಳಿದರು. ನಾನು ನನ್ನ ತಂದೆಯ ಸ್ವತ್ತನ್ನು ನನಗೆ ಕೊಟ್ಟಿಲ್ಲ ಇದಕ್ಕೂ ಏಕೆ ತೊಂದರೆ ಮಾಡುತ್ತೀರಿ ಎಂದು ಹೇಳಿದೆ. ಸದರಿ ಸ್ವತ್ತನ್ನು ಬಿಟ್ಟುಕೊಡುವುದಿಲ್ಲ ಎಂದು ನನಗೂ 2ನೇ ಆರೋಪಿಗೂ ಮಾತಿಗೆ ಮಾತು ಬೆಳೆಯಿತು. ಆಗ 1ನೇ ಆರೋಪಿ ಮು.ಮಾ.1 ರಿಂದ ಹಲ್ಲೆ ಮಾಡಿದರು. ನನ್ನ ಬಲಗೈನ ಹೆಬ್ಬೆರಳು ಮತ್ತು ತಲೆಗೆ ಹಲ್ಲೆ ಮಾಡಿದರು. ನಂತರ ಚಾಸ-3 ಮತ್ತು 4 ರವರು ಜಗಳ ಬಿಡಿಸಿದರು. ನಂತರ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಹೋಗಿ 6 ದಿನಗಳ ಕಾಲ ದಾಖಲಾಗಿದ್ದೆ. ಚಾಸ-1 ರವರು ದೂರು ನೀಡಿರುತ್ತಾರೆ.

ದೂರು ನೀಡಿದ ಮರು ದಿನ ಪೊಲೀಸರು ಮಹಜರ್ ಬರೆದರು. ಘಟನಾ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದೆ. ಆ ಕಾಲಕ್ಕೆ ಚಾಸ–5 ಮತ್ತು 6 ರವರು ಹಾಜರಿದ್ದರು. ಸದರಿ ಮಹಜರ್ ನ್ನು ಬೆಳಿಗ್ಗೆ 8.00 ರಿಂದ 8.30 ರವರೆಗೆ ಬರೆದಿರುತ್ತಾರೆ. ಆ ಕಾಲಕ್ಕೆ ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡರು. ಮು.ಮಾ.1 ರಿಂದ ಆರೋಪಿಗಳು ನನಗೆ ಹಲ್ಲೆ ಮಾಡಿರುತ್ತಾರೆ. ಮು.ಮಾ.1 ನ್ನು ನಾನೇ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಸಾಕ್ಷಿಯ ನಿಪಿ2 ರಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನನ್ನ ಕೈ ಗಾಯವಾದ್ದರಿಂದ ಸಹಿ ಮಾಡಲು ಆಗುತ್ತಿರಲಿಲ್ಲ ಆದ್ದರಿಂದ ಎಡಗೈನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು ಗುರುತಿಸಲಾಯಿತು. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 26.11.2023 ರಂದು ಆರೋಪಿಗಳು ನನ್ನ ವಿರುದ್ಧ ಗಲಾಟೆ ಮಾಡಿದರು ಎಂದರೆ ಸರಿ. ಸದರಿ ಸ್ಥಳದಲ್ಲಿ ದನಕರುಗಳನ್ನು ಕಟ್ಟಿ ಹಾಕಬೇಡಿ ಎಂದದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 2ನೇ ಆರೋಪಿ ನನ್ನ ಮೈಕೈಗೆ ಹೊಡೆದರು ಎಂದರೆ

ಸರಿ. ಗಲಾಟೆಯಲ್ಲಿ ನನ್ನ ಕಪ್ಪು ಮಣಿಸರ ಮತ್ತು ತಾಳಿ ಕಳೆದುಹೋಯಿತು ಎಂದರೆ ಸರಿ. ಆಗ ಚಾಸ-1, ಚಾಸ-3 ಮತ್ತು 4 ರವರು ಜಗಳ ಬಿಡಿಸಿದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಗಲಾಟೆ ನಡೆದ ಸ್ಥಳ ನನ್ನ ಅತ್ತೆ ಪುಟ್ಟಮಾದಮ್ಮನವರಿಗೆ ಸೇರಿದ ಜಾಗ. ಸದರಿ ಜಾಗ 1ನೇ ಆರೋಪಿಯ ತಾಯಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸದರಿ ಪುಟ್ಟಮಾದಮ್ಮ ನಮಗೆ ಬರೆದುಕೊಟ್ಟಿಲ್ಲ. ಪುಟ್ಟಮಾದಮ್ಮ ನಮಗೆ ಅನುಮತಿ ನೀಡಿಲ್ಲ ಆದರೆ ಅವರ ಮಕ್ಕಳು ಅನುಮತಿ ನೀಡಿದ್ದರು. ಆ ದಿನ ನನಗೆ ಮತ್ತು ಆರೋಪಿಗಳಿಗೆ ಯಾವುದೆ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ದೂರನ್ನು ಯಾರು ಕೊಟ್ಟಿಲ್ಲ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 6 ದಿನಗಳ ಕಾಲ ನಾನು ಆಸ್ಪತ್ರೆಯಲ್ಲೆ ಇದ್ದೆ ಎಂದರೆ ಸರಿ. ನಾನು ಆಸ್ಪತ್ರೆಯಿಂದ ಬಂದ ಮರುದಿನ ಪೊಲೀಸರು ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡರು.

ನಿಪಿ2 ನ್ನು ಬರೆಯುವ ಕಾಲಕ್ಕೆ 4 ಜನ ಇದ್ದೇವು. ಯಾವುದೆ ಗಲಾಟೆಯಾಗಿಲ್ಲ ಮತ್ತು ಯಾವುದೆ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ನಾನು ತೋರಿಸಿ ತಂದುಕೊಟ್ಟೆ. ನನ್ನನ್ನು ಪೊಲೀಸರು ಆಸ್ಪತ್ರೆಯಲ್ಲಿ ವಿಚಾರಿಸಿಲ್ಲ ಎಂದರೆ ಸರಿ. ಆರೋಪಿತರು ಸದರಿ ಸ್ಥಳದಲ್ಲಿ ನನಗೆ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ನಾನು ಯು.ಬಿ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತೇನೆ. ನಾನು ಫ್ಯಾಕ್ಟರಿಯಲ್ಲಿ ಬಲಗೈ ಮತ್ತು ತಲೆಗೆ ಗಾಯಮಾಡಿಕೊಂಡು ನನ್ನ ಗಂಡನಿಂದ ನಿಪಿ1 ರಂತೆ ಸುಳ್ಳು ದೂರು ದಾಖಲಿಸುವಂತೆ

ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ2 ಕ್ಕೆ ಠಾಣೆಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ನಾನು ನಿಪಿ2 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**